ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ.   4404-2023

ಸಿ.ಡಬ್ಲ್ಯೂ -08
ಪಿ.ಡಬ್ಲ್ಯೂ-08

ಸಾಕ್ಷಿದಾರನ ಹೆಸರು  :-  ಉಮಾಶಂಕರ
ತಂದೆಯ   ಹೆಸರು  :-  ಬಿ. ಎಂ. ಬೋರಯ್ಯ
ವಯಸ್ಸು  :- 44 ವರ್ಷ
ಉದ್ಯೋಗ  :-  ವ್ಯವಸಾಯ
ವಾಸ  :- ಬ್ಯಾಲದಕೇರೆ

**<u>ಸಾಕ್ಷಿಗೆ ದಿಃ 10.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು</u>.**

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ಅಮಾನತ್ತು ಪಂಚನಾಮೆಗೆ ನನ್ನ ಸಹಿ ಇರುತ್ತದೆ. ದಿಃ 29.07.2022 ರಂದು ಅಮೃತೂರು ಪೊ.ಠಾಣೆಯಲ್ಲಿ ಸಹಿ ಮಾಡಿದ್ದು ಆ ಸಮಯದಲ್ಲಿ ಚಾಸಾ 2 ಮತ್ತು 7 ಸಹ ಇದ್ದರು. ಆಗ 2 ರಿಂದ 3 ಗಂಟೆ ಸಮಯ ಆಗಿತ್ತು. ಆರೋಪಿತರು ಮತ್ತು ಚಾಸಾ 2 ಅವರ ನಡುವೆ ಗಲಾಟೆ ಆಗಿದ್ದು ಚಾಸಾ 2 ಅವರ ರವಿಕೆ ಮತ್ತು ಸೀರೆಯನ್ನು ತಂದಿದ್ದು ಪೋಲಿಸರು ನನ್ನ ಸಹಿಯನ್ನು ಪಡೆದಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಅಮಾನತ್ತು ಪಂಚನಾಮೆಗೆ ಇರುವ ಸಹಿಯನ್ನು ನಿ.ಪಿ 3(ಬಿ)  ಎಂದು ಗುರುತಿಸಲಾಯಿತು. ಮು. ಮಾ. ಗಳನ್ನು ಗುರುತಿಸುತ್ತೇನೆ.

**ಆರೋಪಿ ಪರಃ ಪಾಟೀ ಸವಾಲುಃ ಬಿ.ಆರ್.ಆರ್ ವಕೀಲರಿಂದಃ**

ಚಾಸಾ 1 ಅವರು ನನ್ನ ಸಂಬಂಧಿ ಆಗಬೇಕು.  ಈ ವಿಚಾರವನ್ನು ನಾನು ಪೋಲಿಸರು ಬಂದಾಗ ಹೇಳಿರುವುದಿಲ್ಲ. ಆರೋಪಿತರಿಗೂ ಮತ್ತು ನನಗೂ ವಿಶ್ವಾಸದಿಂದ ಇರುವುದಿಲ್ಲ. ಚಾಸಾ 2 ಅವರು ನೀಡಿದ ದೂರಿನ ಮೇರೆಗೆ ನನ್ನನ್ನು ಕರೆಸಿರುತ್ತಾರೆ. ಚಾಸಾ 2 ಅವರು ನೀಡಿದ ದೂರನ್ನು ನಾನು ನೋಡಿರುವುದಿಲ್ಲ.

ನನ್ನ ವೈಯಕ್ತಿಕ ಕೆಲಸದ ನಿಮಿತ್ಯ ಪೊ. ಠಾಣೆಗೆ ಹೋದಾಗ ನನ್ನ ಸಹಿ ಪಡೆದಿರುತ್ತಾರೆ ನನಗೆ ಪೋಲಿಸರು ಮಹಜರಗೆ ಬರುವಂತೆ ನೋಟಿಸ್ ನೀಡಿರುವುದಿಲ್ಲ. ವೈಯಕ್ತಿಕ ಕೆಲಸವೆಂದರೆ ನಮ್ಮ ತೋಟದಲ್ಲಿ ಕೇಬಲ ಕಳ್ಳತನವಾಗಿದ್ದು ನಾನು ದೂರನ್ನು ನೀಡಲು ಹೋಗಿದ್ದಾಗ ಸಹಿ ಪಡೆದಿರುತ್ತಾರೆ. ಮಹಜರನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. ಮಹಜರನಲ್ಲಿ ನೋಟಿಸ ಮಾಡಿದ ಬಗ್ಗೆ ಬರೆದಿದ್ದಾರೆ ಎಂದರೆ ಸಾಕ್ಷಿ ನೋಟಿಸ್ ಅನ್ನು ಇಲ್ಲೇ ಜಾರಿ ಮಾಡುದಿದ್ದೇನೆಂದು ಬರೆದಿರುತ್ತಾರೆ ಈ ಬಗ್ಗೆ ನನಗೆ ಗೊತ್ತಿಲ್ಲ.

ಮಹಜರ ಸಮಯದಲ್ಲಿ ನಾನು ಚಾಸಾ 2 ಮತ್ತು 7 ಹಾಗೂ ಪೋಲಿಸರು ಇದ್ದರು. ನಿ.ಪಿ 3 ರಲ್ಲಿರುವ ಸಹಿ ಕೊನೆಯ ಸಹಿ ಯಾರದೆಂದು ಮತ್ತು ಎಲ್ಲಿ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ. 3 ಜನರ ಸಹಿಯನ್ನು ಪೋಲಿಸ ಠಾಣೆಯಲ್ಲಿ ಮಾಡಿರುತ್ತೇವೆಂದು ಹೇಳುತ್ತಾರೆ. ಮಹಜರನಲ್ಲಿ ಕಪ್ಪು ಬಣ್ಣದ ಹೂಗಳುಳ್ಳ ಸೀರೆ ಮತ್ತು ಕಪ್ಪು ರವಿಕೆಯಂದು ಬರೆದಿರುತ್ತದೆ. ವಶಪಡಿಸಿಕೊಂಡ ಸೀರೆ ಮತ್ತು ರವಿಕೆಯ ಬೇರೆ ವಿವರಣೆಯನ್ನು ಬರೆದಿರುತ್ತಾರಾ ಎಂದರೆ ಸಾಕ್ಷಿ ಇಲ್ಲವೆಂದು ಹೇಳುತ್ತಾರೆ. ಚಾಸಾ 1 ಅವರು ಮಾತು ಕೇಳಿ ನಾನು ಮಹಜರಗೆ ಸಹಿ ಮಾಡಿದ್ದು ಮು. ಮಾ. ಗಳನ್ನು ಈ ಕೇಸಗೋಸ್ಕರ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.